'ಹಾಗಾದ್ರೆ ಪೆನ್ಷನ್ ತಕ್ಕೊಳ್ಳೊದಿಲ್ವ?' ಅಂತ ನಾನು ಸಹಜವಾಗಿ ಪ್ರಶ್ನೆ ಹಾಕಿದೆ. 'ಹೆ... ಹೆ...' ಅಂತ ನಕ್ಕು ಮುಂದೆ ನಡೆದ.

ಈ ರೀತಿ, ಚಿಕ್ಕಂದಿನಿಂದಲೂ ಕುಕ್ಕರಹಳ್ಳಿ ಕೆರೆಯೊಂದಿಗಿನ ಒಡನಾಟದಿಂದ ನಾನು ಮನುಷ್ಯ ಜೀವನದ ಹಲವು ಮುಖಗಳನ್ನು ಕಂಡಿದ್ದೇನೆ. ಕೆರೆ ನನ್ನ ಕಷ್ಟಗಳಿಗೆ ಸಾಂತ್ವನ ನೀಡಿದೆ; ಮನಸ್ಸಿನ ನೋವುಗಳಿಗೆ ಪ್ರೀತಿಯ ಲೇಪನ ನೀಡಿದೆ; ಏಕಾಂಗಿತನಕ್ಕೆ ಗೆಳೆಯನಾಗಿ ಬಂದು ಬೇಸರವನ್ನು ಹೊಡೆದೋಡಿಸಿದೆ; ಪ್ರಕೃತಿಯ ಬಗ್ಗೆ ಪ್ರೀತಿ ಕುದುರುವಂತೆ ಮಾಡಿದೆ; ಜೀವನದ ದಾರಿಯುದ್ದಕ್ಕೂ ಅನೇಕಾನೇಕ ಜನರ ಗುಣಸ್ವಭಾವಗಳ ಪರಿಚಯ ಮಾಡಿಸಿದೆ; ಮನಸ್ಸು ವಿಷಣ್ಣವಾದಾಗ ಜೀವನೋತ್ಸಾಹವನ್ನು ತುಂಬಿದೆ; ನನ್ನ ಬರವಣಿಗೆಗೆ ಪರೋಕ್ಷವಾಗಿ ಬೆಂಬಲವಾಗಿದೆ; ಮತ್ತೂ ಒಂದು ವಿಶೇಷವೆಂದರೆ ನಾನು ನಾಟಕಗಳಲ್ಲಿ ಅಭಿನಯಿಸಿದ ಪಾತ್ರಗಳ ಮಾತುಗಳನ್ನು ಮನದಟ್ಟು ಮಾಡಿಕೊಳ್ಳಲೂ ನೆರವಾಗಿದೆ. ಪಕ್ಷಿಗಳ ಸಮೂಹದಿಂದ, ಗಿಡಮರಗಳ ಸಮೃದ್ಧಿಯಿಂದ ಪ್ರಾಕೃತಿಕ ವೈಭವದಿಂದ ಕೂಡಿ, ನೋಡುಗರಿಗೆ ಒಮ್ಮೆ ಆತ್ಮೀಯ ತಾಣವಾಗಿದ್ದ ಕೆರೆ ಇಂದು ಜನಜಂಗುಳಿಯ ವ್ಯಾಯಾಮದ ತಾಣವಾಗಿ ಪರಿವರ್ತನೆ ಹೊಂದಿ, ವ್ಯಾಪಾರೀಕರಣದತ್ತ ಕ್ರಮೇಣ ಹೆಜ್ಜೆ ಇಕ್ಕುತ್ತಿದೆ. ಕುಡಿಯುವುದಕ್ಕಿರಲಿ, ಕೆರೆ ನೀರಿನಲ್ಲಿ ಕೈಕಾಲುಮುಖ ತೊಳೆಯುವುದಕ್ಕೂ ಆಗದಷ್ಟು ಬಗ್ಗಡ ಕಟ್ಟಿದೆ. ಹಸಿರು ಸಂಪತ್ತು ಕ್ಷೀಣಿಸುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಬುಲ್ಡೋಜರ್‌ಗಳು ಮತ್ತು ಜೆಸಿಬಿ ವಾಹನಗಳು ಕೆರೆ ಅಂಗಳದಲ್ಲಿ ಯದ್ವಾತದ್ವಾ ಓಡಾಡಿದರೆ ಅದು ಕೆರೆಯ ಧ್ವಂಸಕ್ಕೆ ಕಾರಣವಾಗುತ್ತದೆಯೇ ಹೊರತು ಅಭಿವೃದ್ಧಿಯಾಗುವುದಲ್ಲ. ಇಂದು ಮನಸ್ಸಿಗಿಂತ ಮನುಷ್ಯನ ಶರೀರಕ್ಕೆ ಪ್ರಾಧಾನ್ಯ ಬರುತ್ತಿದೆ. ನಿಜ, ಶರೀರ ಇದ್ದರೆ ತಾನೆ ನಮ್ಮ ಸಂಪರ್ಕ ಈ ಜಗತ್ತಿನೊಂದಿಗೆ? ಹಾಗೆಯೇ, ಸ್ವಸ್ಥ ವಾತಾವರಣವಿದ್ದರೆ ತಾನೆ ಸ್ವಸ್ಥ ಶರೀರ ಮತ್ತು ಸ್ವಸ್ಥ ಮನಸ್ಸು? ಈ ಎರಡೂ ಸ್ವಸ್ಥಗಳನ್ನು ಗಳಿಸಿ, ಉಳಿಸಿಕೊಳ್ಳಬೇಕಾದರೆ ನಾವು ಇರುವ ಪ್ರಾಕೃತಿಕ ಸಂಪನ್ಮೂಲವನ್ನು ಎಚ್ಚರಿಕೆಯಿಂದ ಬಳಸಿ, ನಮ್ಮ ಮುಂದಿನವರಿಗೂ ಕೊಡುಗೆಯಾಗಿ ನೀಡಬೇಕು. ಸ್ವಭಾವಸಿದ್ಧವಾಗಿ ಲಭ್ಯವಾದ ಪ್ರಾಕೃತಿಕ ಸಂಪತ್ತನ್ನು ಬೆಳೆಸಿಕೊಳ್ಳುತ್ತಲೇ ನಾವು ಪೂರ್ವಗಾಮಿಯಾಗಿ ಸಾಗಬೇಕಿದೆ. ಆ ದಿಕ್ಕಿನಲ್ಲಿ ನೂರಾರು ವರ್ಷಗಳಿಂದ ವೃಕ್ಷ ಮತ್ತು ಜೀವಜಾಲಕ್ಕೆ ಬೆಂಬಲವಾಗಿರುವ ಕುಕ್ಕರಹಳ್ಳಿ ಕೆರೆಯನ್ನು ಅದರೆಲ್ಲ ನೈಸರ್ಗಿಕ ಸೌಂದರ್ಯದೊಂದಿಗೆ ಕಾಪಾಡಬೇಕಾದುದು ಎಲ್ಲ ಪ್ರಜ್ಞಾವಂತ ನಾಗರಿಕರ ನೈತಿಕ ಜವಾಬ್ದಾರಿಯೆಂಬುದು ಸ್ವಯಂವೇದ್ಯವಾದಾಗ, ಹೊಸ ಚಿಂತನೆಯ ಚೈತ್ರವು ತಾನಾಗಿಯೇ ಚಿಮ್ಮುತ್ತದೆ ಎಂದು ನಾವಾದರೂ ಭಾವಿಸಬಹುದು. ಮಾನವಕೊಂಡಿಯ ನಿರಂತರತೆಗೆ ಇದೊಂದು ಸಕಾರಾತ್ಮಕ ನಡೆಯೇ ಹೌದು. ಕೊನೆಯದಾಗಿ, ಕುಕ್ಕರಹಳ್ಳಿ ಕೆರೆ ಎಲ್ಲರಿಗೂ ಎಲ್ಲ ಕಾಲಕ್ಕೂ ಉಳಿಯಲಿ; ಮಾತ್ರವಲ್ಲ, ನಮ್ಮ ನಾಡಿನ ಎಲ್ಲ ನೆಲ ಸಂಪನ್ಮೂಲ, ಜಲ ಸಂಪನ್ಮೂಲ ಸಂಪತ್ತುಗಳೂ ಎಲ್ಲ ಕಾಲದ ಎಲ್ಲ ಜನರಿಗೂ ಲಭ್ಯವಾಗಬೇಕೆಂದು ಆಶಿಸುತ್ತಾ ಈ ಬರಹಕ್ಕೆ ವಿದಾಯ ಹೇಳುತ್ತೇನೆ.

## ಹೊರೆಯಾಲ ದೊರೆಸ್ವಾಮಿ

ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹೊರೆಯಾಲ ಗ್ರಾಮದವರು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕರಾಗಿದ್ದರು. ಒಂಬತ್ತು ಕವನ ಸಂಕಲನಗಳು, ಮೂರು ಕಥಾಸಂಕಲನಗಳು, ಮೂರು ಕಾದಂಬರಿಗಳು, 15 ನಾಟಕಗಳು, ಐದು ಜನಪದ ಸಾಹಿತ್ಯ ಸಂಗ್ರಹಗಳು ಸೇರಿದಂತೆ ಈವರೆಗೆ 56 ಕೃತಿಗಳನ್ನು ಪ್ರಕಟಿಸಿದ್ದಾರೆ. 'ಬಯಲು' ಕಾದಂಬರಿ ಚಲನಚಿತ್ರವಾಗಿದೆ. ಪ್ರಸ್ತುತ ಮೈಸೂರಿನಲ್ಲಿ ವಾಸ.